## ಸುದ್ದಿಸ್ಫೋಟದ ಭಯೋತ್ಪಾದನೆ ನಿಲ್ಲಲಿ!

ವಿಶ್ವವನ್ನೇ ನಡುಗಿಸಿದ್ದ ಕೋವಿಡ್ 19 ಮಾರಕ ರೋಗಕ್ಕೆ ಕಾರಣವಾದ ಕೊರೊನಾದ ರೂಪಾಂತರ ತಳಿ ಹರಡುತ್ತಿದೆ. ಇದು ನಿಜ. ಆದರೆ, ಈ ಮಹಾಮಾರಿ ರಣಕೇಕೆ ಹಾಕಲಾರಂಭಿಸಿದೆ. ಪುನಃ ವಕ್ಕರಿಸಿದ ಕ್ರೂರಿ ಇನ್ನೆಷ್ಟು ಜನರನ್ನು ಬಲಿ ತೆಗೆದುಕೊಳ್ಳುತ್ತೋ ಎಂದು ವಾಹಿನಿಗಳು ಭಯ ಹುಟ್ಟಿಸುವ ಪ್ರಚಾರ ಮಾಡುವುದು ಸರಿಯಲ್ಲ.

ವಾಯುಭಾರ ಕುಸಿತದಿಂದ ಮಳೆಯಾದಾಗಲೂ ಮುಂಗಾರು ಅಬ್ಬರವೆಂದು ವಾಹಿನಿಗಳು ದಿಕ್ಕೆಡಿಸುತ್ತಿವೆ! ಇದೇ ವೇಳೆ, ವಾಯುಭಾರ ಕುಸಿತದಿಂದ ಮುಂದಿನ 4 ದಿನ ಮಳೆಯಾಗಲಿದೆಯೆಂದೂ, ಕೊರೊನಾ ಸೌಮ್ಯ ಸ್ವಭಾವದ ಲಕ್ಷಣಗಳನ್ನು ಹೊಂದಿದ್ದು ಆತಂಕ ಬೇಡ, ಎಚ್ಚರಿಕೆ ಇರಲಿ ಎಂದು ಪತ್ರಿಕೆಗಳು ಸುದ್ದಿಯನ್ನು ಪ್ರಕಟಿಸುತ್ತಿವೆ.

ವಾರ್ತಾವಾಹಿನಿಗಳು ವರ್ತಮಾನದ ಘಟನೆಗಳಿಗೆ ವಾಸ್ತವ ಚಿತ್ರಣವನ್ನೇ ನೀಡಬೇಕು. ಜನ ಬೆಚ್ಚಿ ಬೀಳುವಂತೆ ಬ್ರೇಕಿಂಗ್ ನ್ಯೂಸ್ ನೀಡುವ ಸ್ಪರ್ಧೆಯನ್ನು ಬಿಟ್ಟರೆ ಒಳ್ಳೆಯದು.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ



## ಸೀರೆ ಉಟ್ಟರೆ ಸಾಕೆ?

ಖಾಸಗಿ ಟೀವಿ ವಾಹಿನಿಗಳಲ್ಲಿ ಭಾವಶೂನ್ಯತೆ ದಟ್ಟವಾಗಿ ಹಬ್ಬಿದೆ. ಇತ್ತೀಚೆಗೆ ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿ ತೊಟ್ಟಿಲ ಕೂಸನ್ನು ರಮಿಸುವ ದೃಶ್ಯಕ್ಕೆ ಮೂವರು ಯುವಕರಿಗೆ ಸೀರೆ ಉಡಿಸಲಾಗಿತ್ತು. ಮೂವರೂ ಗಡ್ಡ ಬಿಟ್ಟುಕೊಂಡು ಸೆರಗು ಹೊದ್ದುಕೊಂಡಿದ್ದರು. ಈ ರೀತಿ ಹೆಂಗಸರ ವೇಷ ಹಾಕಿ ನೋಡುಗರ ತಾಳ್ಮೆ ಪರೀಕ್ಷಿಸಬಾರದು. ಮಗುವಿಗೆ ಹಾಲು ಕುಡಿಸುವುದು, ಸ್ನಾನ ಮಾಡಿಸುವುದು ಹೇಗೆ ಎಂಬ ಬಗ್ಗೆ ಲವಲೇಶ ಜ್ಞಾನ ಇಲ್ಲದಿರುವುದನ್ನು ನೋಡುಗರು ನಂಬಬೇಕು.

—ವಾ. ಮುರಳೀಧರ, ತೀರ್ಥಹಳ್ಳಿ

ವಾರದ ಪತ್ರ

## ವಸ್ತು ಒಂದು, ಕಥೆ ಎರಡು



ಕಲರ್ಸ್ ಕನ್ನಡ ವಾಹಿನಿಯ 'ನಿನಗಾಗಿ' ಧಾರಾವಾಹಿಯನ್ನು ಕೆಲವು ವೀಕ್ಷಕರು ಮೆಚ್ಚಿಕೊಂಡಿದ್ದಾರೆ. ಇದರಲ್ಲಿ ರಚ್ಚುಗೆ (ದಿವ್ಯಾ ಉರುಡುಗ) ಮಲತಾಯಿ ವಜ್ರೇಶ್ವರಿ ತುಂಬಾ ಪ್ರೀತಿ ತೋರಿದಂತೆ ನಾಟಕ ಮಾಡುತ್ತಾ ಅವಳನ್ನು ತನಗೆ ಹೇಗೆ ಬೇಕೋ ಬಳಸಿಕೊಂಡಳು. ನಾಯಕ ನಟನ ಮಗಳು ರಚ್ಚುಗೆ ಹತ್ತಿರವಾಗುತ್ತಿರುವುದನ್ನು ನೋಡಿ ವಜ್ರೇಶ್ವರಿ ಅವರನ್ನು ಬೇರ್ಪಡಿಸಲು ಪ್ರಯತ್ನ ಮಾಡುತ್ತಲೇ ಇರುತ್ತಾಳೆ. ಇದರ ಎರಡನೆಯ ಕಥಾ ಭಾಗ, ಕೋಟ್ಯಧಿಪತಿ ಜಗದೀಶಚಂದ್ರ ಹಾಗೂ ಸಹೋದರರಾದ ಈಶ್ವರಚಂದ್ರ, ರಮಾಕಾಂತ ಕೂಡುಕುಟುಂಬದಲ್ಲಿನ ಒಳ ಜಗಳದ್ದು. ಆ ಕುಟುಂಬದಿಂದ ಹೊರಬಂದ ಜೀವ ಬೇರಾರು ಅಲ್ಲ, ಸಹಸ್ರಾರು ಕೋಟಿ ಆಸ್ತಿಯ ಒಡೆಯ ಜಗದೀಶಚಂದ್ರನ ಹಿರಿಯ ಮಗ. ಸಂಜೀವನೇ ಜೀವ ಎಂದು ಜಗದೀಶಚಂದ್ರ ಮರಣದ ನಂತರ ತಿಳಿಯುವುದು. ಇದೇ ಈ ಧಾರಾವಾಹಿ ತಿರುವು. ಇದು ವೀಕ್ಷಕರ ಕುತೂಹಲವನ್ನು ಸೆಳೆದಿತ್ತು. ಈ ಧಾರಾವಾಹಿ ಹಿಂದಿಗೂ ಡಬ್ ಆಗ್ತಿದೆ. ನಮಗೆ ಖುಷಿ ತರುವ ವಿಚಾರ.

—ಅನುರಾಧ ಟಿ., ದಾವಣಗೆರೆ

## ಮನ ಗೆದ್ದ ದತ್ತ ತಾತ

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು'ನಲ್ಲಿ ದತ್ತ ತಾತನ ಪಾತ್ರ ಚೆನ್ನಾಗಿದೆ. ಇಳಿ ವಯಸ್ಸಿನಲ್ಲೂ ಆತ್ಮವಿಶ್ವಾಸದಿಂದ ಈ ಪಾತ್ರವನ್ನು ವೆಂಕಟರಾವ್ ನಿರ್ವಹಿಸುತ್ತಿರುವ ಬಗೆ ವೀಕ್ಷಕರ ಮನಸು ಗೆದ್ದಿದೆ. ಗಂಭೀರತೆಯಲ್ಲೂ ತುಂಟತನದಲ್ಲೂ ತಿಳಿಹಾಸ್ಯ ಪ್ರಜ್ಞೆಯ ತಾತ ಎಲ್ಲರಿಗೂ ಇಷ್ಟ.

—ವೀಣಾ ಶಂಕರ್, ಬೆಂಗಳೂರು

## ಆನೆ ನಡೆದದ್ದೇ ದಾರಿ

ಇತ್ತೀಚೆಗೆ ಕನ್ನಡ ಧಾರಾವಾಹಿಗಳ ಸ್ಥಿತಿ 'ಆನೆ ನಡೆದದ್ದೇ ದಾರಿ' ಎನ್ನುವಂತಾಗಿದೆ. ಸೀರಿಯಲ್ ಬಗ್ಗೆ, ಅದರ ತಪ್ಪುಗಳನ್ನು ಹುಡುಕಿ ತಮ್ಮ ಅಭಿಪ್ರಾಯವನ್ನು ತಿಳಿಸುವ ಏಕೈಕ ಮಾರ್ಗವೆಂದರೆ ಅದು 'ಸುಧಾ' ಪತ್ರಿಕೆಯ 'ಜಾಣರ ಪೆಟ್ಟಿಗೆ'. ಅದರಲ್ಲಿ ವೀಕ್ಷಕರು ಟೀಕೆ ಟಿಪ್ಪಣಿಗಳನ್ನು ನಿರಂತರ ಬರೆಯುತ್ತಿದ್ದರೂ ಫಲಪ್ರದವಾಗುತ್ತಿಲ್ಲ. 'ನೀವು ಹೇಳಿಕೊಳ್ಳುತ್ತಾ ಇರಿ, ನಾವು ಮಾಡುವುದೇ ಹೀಗೆ' ಎಂಬ ಧೋರಣೆ ಅವರದ್ದು. ಕತೆಯ ಆದಿಗೂ, ನಂತರದ ಕತೆಗೂ ಯಾವುದೇ ಸಂಬಂಧ ಇರುವುದಿಲ್ಲ. ಅಂತ್ಯವಂತೂ ನಿರೀಕ್ಷೆಗೆ ನಿಲುಕುವುದೇ ಇಲ್ಲ. ವರ್ಷಾನುಗಟ್ಟಲೆ ಎಳೆಯುವ ಸಾಹಸ ಮಾತ್ರ ನಡೆಯುತ್ತದೆ.

—ಪುಷ್ಪಾ ಎನ್.ಕೆ. ರಾವ್

## ನಿರಾಶೆ ಉಂಟುಮಾಡಿದ ಸಂಚಿಕೆ

ಝೀ ಕನ್ನಡದ 'ಶ್ರೀರಸ್ತು ಶುಭ ಮಸ್ತು' ಧಾರಾವಾಹಿಯ ಒಂದು ಸಂಚಿಕೆಯಲ್ಲಿ ಪಾತ್ರಗಳ ದುರುಪಯೋಗ ಅತಿ ಎನ್ನುವಂತಿದೆ. ಖಳನಾಯಕಿಯ ಕುತಂತ್ರ ಈ ಬಾರಿ ನಮ್ಮ ಹೆಮ್ಮೆಯ ಆಶಾ ಕಾರ್ಯಕರ್ತೆಯರ ಕಡೆ ಹೋಗಿದೆ. ಆಶಾ ಕಾರ್ಯಕರ್ತೆಯರು ದೊಡ್ಡ ಶ್ರೀಮಂತನ ಮನೆಗೆ ನುಗ್ಗಿ ಮಗುವನ್ನು ಅಪಹರಿಸುವ ಪ್ರಯತ್ನ ಮಾಡುತ್ತಾರೆ. ಒಂದು ಉತ್ತಮ ಧಾರಾವಾಹಿ ಅನಿಸುವಷ್ಟರಲ್ಲಿ ಈ ರೀತಿಯ ದೃಶ್ಯ ನಿಜಕ್ಕೂ ಆಘಾತವನ್ನು ಉಂಟು ಮಾಡಿದೆ. ಖಳನಾಯಕಿಯರ ಕುತಂತ್ರಗಳಿಗೆ ಈ ಪರಿಯ ಪಾತ್ರ ಸೃಷ್ಟಿ ಮಾಡಬೇಡಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮೋಡಿ ಮಾಡಿದ ಸರಿಗಮಪ

ಝೀ ಕನ್ನಡದ 'ಸರಿಗಮಪ'ದಲ್ಲಿ ಮನೋಜ್ ಪಿ. ಭಾರ್ಗವ್ ತುಂಬಾ ಚೆನ್ನಾಗಿ ಹಾಡಿದರು. ಸಂಗೀತ ಕಲಿತಿದ್ದ ಆ ಮಗು ಆರು ತಿಂಗಳು ಸ್ಕೂಲ್, ಮನೆ ಬಿಟ್ಟು ಹಾಡಿದ್ದು ಗಮನಾರ್ಹ.

—ಗೌರಿ ಆರಾಧ್ಯ, ಕುಲಗಾಣ

ಝೀ ಕನ್ನಡದ 'ಸರಿಗಮಪ'ದಲ್ಲಿ ಈ ವಾರ ಗಾಯಕರು ಹಳೆಯ ಚಿತ್ರಗಳ ಸುಮಧುರ ಗೀತೆಗಳನ್ನು ಹಾಡಿದರು. ಇದರಿಂದ ನಾದಮಯ ಗೀತೆಗಳನ್ನು ಕೇಳಲು ಒಳ್ಳೆಯ ಅವಕಾಶ ಸಿಕ್ಕಂತೆ ಆಯಿತು. ಬಾಳು ಬೆಳಗುಂದಿ 'ಹೃದಯ ಸಮುದ್ರ ಕಲಕಿ' ಹಾಡಿಗೆ ಧ್ವನಿಯಾಗಿದ್ದು, ಬಾಲ ಗಾಯಕರು ಕ್ಲಿಷ್ಟಕರ ಹಾಡುಗಳನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದ್ದು ವಿಶೇಷ.

—ಭಾರತೀ ಗಂಗಾಧರ್, ಬೆಂಗಳೂರು